ಶ್ರೀ ಅಣ್ಣಾರಾವ್ ಗಣಮುಖಿ.—ಆ ರೀತಿಯಾಗಿ ಅವರು ಹೇಳುವುದಕ್ಕೆ ಕಾರಣವಿಲ್ಲ. Gift deeds ಸರ್ಕಾರಕ್ಕೆ ಇನ್ನೂ ಬರೆದುಕೊಟ್ಟಿಲ್ಲ. ಇದೊಂದೂ ಇಲ್ಲದೆ ಹಣ claim ಮಾಡಿದರೆ ಹೇಗೆ? Gift deeds ಬರೆಸಿ ಕೊಟ್ಟರೆ ಎಸ್ಟಿಮೇಟ್ ವಗೈರೆ ಮಾಡಿಸಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗಿಫ್ಟ್‌ಡೀಡ್ ಬರೆದುಕೊಟ್ಟಿದ್ದಾರೆ, ಅಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಗಿಫ್ಟ್‌ಡೀಡ್ ಬರೆದುಕೊಟ್ಟಿಲ್ಲ. ಬರೆದುಕೊಟ್ಟ ಅನಂತರ ಎಸ್ಟಿಮೇಟ್ ವಗೈರೆ ಮಾಡಿಸುತ್ತೇವೆ. ಗ್ರಾಂಟ್-ಇನ್-ಏಡ್ ಶಾಲೆಗಳಿಗೆ ಮಾತ್ರ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಎಸ್. ಪುಟ್ಟಣ್ಣ.—ಬೊಮ್ಮೇನ ಹಳ್ಳಿಯಲ್ಲಿ ಏಡೆಡ್ ಸ್ಕೂಲ್ ಇದೆ. ಅಲ್ಲಿ ಹುಡುಗರು ಜಾಸ್ತಿಯಾಗಿದ್ದಾರೆ. ಇಂಥ ಏಡೆಡ್ ಸ್ಕೂಲನ್ನು ಸರ್ಕಾರಿ ಪ್ರೈಮರಿ ಸ್ಕೂಲಾಗಿ ಮಾಡಕೂಡದೆನ್ನುವುದು ಸರ್ಕಾರದ ನೀತಿಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಕಟ್ಟಡದ ವಿಷಯಕ್ಕೆ ಆ ನೀತಿ ಇಲ್ಲ. ವರ್ಷೇ ವರ್ಷೇ ಸರ್ಕಾರಿ ಶಾಲೆಗಳನ್ನು ತೆರೆಯುವುದರಲ್ಲಿ ಇದನ್ನೂ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಪುಟ್ಟಣ್ಣ.—ಕಟ್ಟಡವಿದ್ದು, ಹುಡುಗರು ಜಾಸ್ತಿಯಾಗಿ ಇರುವಾಗ ಸಹ ಮಾನ್ಯ ಮಂತ್ರಿಗಳು ಇಲ್ಲಿ ಕೊಡುವ ಉತ್ತರವನ್ನು ತಿಳಿದುಕೊಂಡು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಿಲ್ಲ ಮತ್ತು ಏಡೆಡ್ ಶಾಲೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯ ಪಾಲಿಸಿ ಇದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಪಾಲಿಸಿಯ ಪ್ರಶ್ನೆಯಲ್ಲ. ಹಿಂದೆ ಒಂದು ಕಟ್ಟಡವಿದ್ದು ಹೆಚ್ಚಿಗೆ ಕಟ್ಟಡ ಬೇಕಾದಲ್ಲ ಮತ್ತು incomplete ಆಗಿರುವ ಕಟ್ಟಡಗಳನ್ನು ಮುಗಿಸುವುದಕ್ಕೋಸ್ಕರ ಸಹಾಯ ಮಾಡುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರದಿಂದ ಗ್ರಾಂಟ್ ಕೊಟ್ಟು ಕೂಡಲೆ ಸರ್ಕಾರಿ ಶಾಲೆಯನ್ನಾಗಿ ಮಾಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಮುಂದಿನ ವರ್ಷದ ಪ್ರೋಗ್ರಾಂನಲ್ಲಿ ಬಂದರೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾನು ತಮ್ಮೊಡನೆ ಆ ಭಾಗದಲ್ಲಿ ಸಂಚಾರ ಮಾಡಿದಾಗ ಇಲಾಖೆಯ ಅಧಿಕಾರಿಗಳಿಗೆ ಇಂಥ ರೀತಿಯಲ್ಲಿ ರಿಕಾರ್ಡ್ ಮಾಡಿಕಳಿಸಿಕೊಡಿ ಎಂದು ಹೇಳಿದ್ದರೂ ಸಹ ಆ ಪ್ರಕಾರ ಸ್ಥಳೀಯ ಅಧಿಕಾರಿಗಳು ಮಾಡದೆ ಅವರ ಕರ್ತವ್ಯದಲ್ಲಿ ಲೋಪವಾಗಿರುವುದರಿಂದ ಅವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ gift deed ಇನ್ನೂ ಬರೆದುಕೊಟ್ಟಿಲ್ಲ. gift deed ಕೊಟ್ಟ ಅನಂತರ ನಾವು ವಿಚಾರ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧಿಕಾರಿಗಳು ಪೂರ್ಣ ವಿವರಗಳನ್ನು ತಮಗೆ ಕಳಿಸಿಲ್ಲ. ಆ ವಿಷಯ ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಆ ವಿಚಾರದಲ್ಲಿ ಅಧಿಕಾರಿಗಳಿಗೆ ಬರೆಯುತ್ತೇವೆ.

Grants to Sri Kalmeswara High School at Hole-Alur in Ron Taluk.

*Q.—78. Sri A. J. DODDAMETI (Ron).—

Will the Government be pleased to state :—

(*a*) whether it is a fact that Sri Kalmeswara High School at Hole-Alur, Ron Taluk, Dharwar District, is the only one that was granted to the Bombay Karnatak out of the Multi-purpose High Schools sanctioned by the former Bombay Government in 1956 under the Second Five-Year Plan according to the directions of the Central Government;

(*b*) whether the policy of sanctioning maintenance grant pertaining to the agricultural section as was being granted every year during the concerned year itself in the Bombay State is being adopted in Mysore State also;

(*c*) if so, whether it is a fact that the grant of 1958-59 relating to the agricultural section of Sri Kalmeswara High School is not yet sanctioned;

(*d*) whether it is a fact that the allotment of grant for the next year is made on the basis of the expenditure incurred this year;

(*e*) if so, whether they are aware that the management of the rural high schools will be put to financial difficulties;

(*f*) whether they will make arrangements in future to provide grants of the respective years during that year itself to such high schools?

A.—Sri ANNA RAO GANAMUKHI (Minister for Education).—

(*a*) No.

(*b*) Same procedure is being followed.

(*c*) The grant for 1958-59 is being paid during the current year.

(*d*) Yes, for normal grant.

(*e*) Since advance grants are paid, the schools are not likely to be put to any financial difficulties.

(*f*) *Vide* replies to clause (*b*).

ಶ್ರೀ ಎ. ಜೆ. ದೊಡ್ಡಮೆಟಿ.—ಸಪ್ಲಿಮೆಂಟರಿ (*e*)ನಲ್ಲಿ ಅನುದಾನಗಳನ್ನು ಮುಂಗಡವಾಗಿ ಕೊಡುವುದರಿಂದ ಸ್ಕೂಲುಗಳಿಗೆ ಆರ್ಥಿಕ ತೊಂದರೆ ಉಂಟಾಗುವ ಸಂಭವವಿಲ್ಲ ಎಂದು ಹೇಳಿದ್ದೀರಿ. ಮತ್ತೆ (*e*)ಗೆ ಉತ್ತರವಾಗಿ 1958-59ನೆಯ ಸಾಲಿನದನು

1959-60ನೆಯ ಸಾಲಿನಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನು ನೋಡಿದರೆ ಟೆಕ್ನಿಕಲ್ ಉತ್ತರ ಇದ್ದ ಹಾಗೆ ಕಾಣುತ್ತದೆ. ಇದರಲ್ಲಿ ಯಾವುದು ಸರಿ?

†ಶ್ರೀ ಅಣ್ಣಾರಾವ್ ಗಣಮುಖಿ.—ಅವರು 13145 ರೂಪಾಯಿಗಳನ್ನು ಕೇಳಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅದನ್ನು ಯಾವ ತಿಂಗಳಿನಲ್ಲಿ ಕೊಡಬಹುದು?

ಶ್ರೀ ಅಣ್ಣಾರಾವ್ ಗಣಮುಖಿ.—ಅವರ ಕಡೆಯಿಂದ ಲೆಕ್ಕ ಕಳಿಸಿದ್ದಾರೆ. ಡಿ.ಪಿ.ಐ.ಯಿಂದ ರಿಪೋರ್ಟ್ ಬಂದ ಮೇಲೆ ಕೊಡುತ್ತೇವೆ.

ಶ್ರೀ ಟಿ. ಕೆ. ಕಂಬಳಿ.—ಪ್ರಶ್ನೆ (*b*)ಗೆ ಉತ್ತರವಾಗಿ ಹೇಳಿದ್ದೀರಿ, ಪ್ರತಿ ವರ್ಷವೂ ಆ ವರ್ಷದ ಅವಧಿಯಲ್ಲೇ ಅನುದಾನವನ್ನು ಮಂಜೂರು ಮಾಡುತ್ತಿದ್ದೇವೆಂದು. ಆದರೆ 1958-59ನೆಯ ವರ್ಷದ ಅನುದಾನವನ್ನು 1959-60ನೆಯ ಸಾಲಿನಲ್ಲಿ ಕೊಟ್ಟಿದ್ದೀರಿ. ಹೀಗೆ ತಡಮಾಡಿ ಕೊಡುವುದರಿಂದ ತೊಂದರೆ ಯಾಗುತ್ತದೆ. ಆದುದರಿಂದ ಒಂದು ವರ್ಷ ಮೊದಲೇ ಅಡ್ವಾನ್ಸ್ ಗ್ರಾಂಟ್ ಕೊಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಜುಲೈ ಮತ್ತು ಡಿಸೆಂಬರ್ ತಿಂಗಳಲ್ಲಿ ಎರಡು ಕಂತುಗಳಲ್ಲಿ ಅಡ್ವಾನ್ಸ್ ಗ್ರಾಂಟು ಕೊಡುತ್ತೇವೆ.

Starting of Neera Centres in the State.

*Q.—104. Sri S. MUNI RAJU (Chikkaballapur).—

Will the Government be pleased to state:—

(*a*) when did the Government decide to sell Neera in the State;

(*b*) steps, if any, taken in implementing this decision?

A.—Sri N. RACHIAH (Minister for Agriculture, Excise and Social Welfare).

(*a*) In the Bombay and Madras Karnatak areas, Neera was being sold already at the time of integration (1st November 1956) and this is being continued in those areas. In the dry districts of the old Mysore State and in Ramanagaram and Channapatna taluks, the Scheme was introduced in general, according to the orders issued in May, 1958, but the Neera Centres began to function generally from 1st July 1959. Neera was being sold in Davangere for some time soon after Chitradurga district went dry.

(*b*) For the dry districts of the old Mysore area, *viz.*, Kolar, Tumkur, Chitradurga, Chickmagalur, Shimoga, Bellary and Hassan, seven Junior Excise Inspectors and 52 Tree Markers (7) for each dry district and 3 for Ramanagaram and Channapatna taluks) have been sanctioned.

The draft Neera Rules regarding administration of the Scheme are being finalised. Till these new rules are notified the administration in the areas of the old Mysore State will be in the hands of the Excise Commissioner, Khadi Board being entrusted with supervision. Licensing of Neera Centres and Sub-Centres has however been ordered to be subject to scrutiny and investigation by the Excise Commissioner, Deputy Commissioner, Registrar of Co-operative Societies and the Khadi Board and subject to approval of Government. In Bombay and Madras Karnataka, the administration is according to local laws.

ಶ್ರೀ ಎಸ್. ಮುನಿರಾಜು.—ಈಗ ಸದ್ಯದಲ್ಲಿ ನೀರಾಕ್ಕೆ ಸಂಬಂಧಪಟ್ಟಂತೆ ಏನಾದರೂ ನಿಬಂಧನೆಗಳು ಇವೆಯೇ?

†ಶ್ರೀ ಎನ್. ರಾಚಯ್ಯ.—ಇಲ್ಲಿಯತನಕ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇರಲಿಲ್ಲ. ಮೊದಲು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಗ್ರಾಂಟು ಮಾಡುತ್ತಿದ್ದ ಕಾರಣ ಏನು ರೂಲ್ಸ್ ಅನುಸರಿಸುತ್ತಿದ್ದರು ಎಂಬುದು ಗೊತ್ತಿಲ್ಲ. ಪಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡುತ್ತೇನೆ.

Sri G. VENKATAI GOWDA.—Is it not a fact that representations have been made to the Government for withdrawing permission given to the neera centres?

Sri N. RACHIAH.—There are some representations made to Government.

Sri G. VENKATAI GOWDA.—Is it to give permision or to withdraw permision?

Sri N. RACHIAH.—The Government have not taken any decision in the matter.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ನೀರಾ ಎಲ್ಲೆಲ್ಲಿ ಮಾರಾಟ ಮಾಡುತ್ತಾರೆ, ಎನ್ನುವ ವಿಷಯದಲ್ಲಿ ತಮಗೆ ಮಾಹಿತಿ ಇಲ್ಲ ಎಂದು ತಿಳಿದು ಕೊಳ್ಳೋಣವೇ?

ಶ್ರೀ ಎನ್. ರಾಚಯ್ಯ.—ನೀರಾ ಕೇಂದ್ರಗಳನ್ನು ಸ್ಥಾಪನೆಮಾಡುವ ವಿಚಾರದಲ್ಲಿ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನವರು ಸರ್ಕಾರದ ಅನುಮತಿ ಇಲ್ಲದೆ ನಾನಾ ಕಡೆಗಳಲ್ಲಿ ಸ್ಥಾಪನೆಮಾಡಿದುದರಿಂದ ಪಾನನಿರೋಧ ಕಾನೂನಿಗೆ ಸ್ವಲ್ಪ ಧಕ್ಕೆ ಬರುವಂತೆ ಸರ್ಕಾರಕ್ಕೆ ಕಂಡುಬಂದದ್ದರಿಂದ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಯೋಚನೆಮಾಡಿ ಒಂದು ತೀರ್ಮಾನ ತೆಗೆದುಕೊಳ್ಳೋಣ ಎನ್ನುವ ದೃಷ್ಟಿಯಿಂದ ಅದನ್ನು ಎಕ್ಸೈಜ್ ಕಮೀಷನರಿಗೆ, ಯಾವ ಕೇಂದ್ರಗಳಲ್ಲೂ ಕೂಡ ನೀರಾಕ್ಕೆ ಹೊಸದಾಗಿ ಲೈಸನ್ಸ್ ಕೊಡಬಾರದು, ಅಕಸ್ಮಾತ್ತಾಗಿ ಕೊಟ್ಟಿರುವ ಕಡೆ ರಿನ್ಯೂ ಮಾಡಬಾರದು ಎಂದು ಆದೇಶ